# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 497 |
| 02. ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 03. ಉತ್ತರಿಸುವ ದಿನಾಂಕ | : | 22-12-2022 |
| 04. ಉತ್ತರಿಸುವ ಸಚಿವರು | : | ಮಾನ್ಯ ಗೃಹ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರಹಸ್ಯವಾಗಿ ಉಗ್ರಗಾಮಿ ಚಟುವಟಿಕೆಗಳಲ್ಲಿ ತೊಡಗಿರುವ ಸ್ಲೀಪರ್ ಸೆಲ್ ಮತ್ತು ಮೂಲಭೂತವಾದಿ ಸಂಘಟನೆಗಳ ಕಾರ್ಯಚಟುವಟಿಕೆಗಳ ಬಗೆಗಿನ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ: ಮಾಹಿತಿಯನ್ನು ಮುಂದಿದೆಯೇ; | ರಾಜ್ಯದಲ್ಲಿ ಉಗ್ರಗಾಮಿ ಚಟುವಟಿಕೆಗಳಲ್ಲಿ ತೊಡಗಿರುವ ಸ್ಲೀಪರ್‌ಸೆಲ್ ಮತ್ತು ಮೂಲ ಭೂತವಾದಿ ಸಂಘಟನೆಗಳ ಕಾರ್ಯಚಟುವಟಿಕೆಗಳ ಕುರಿತಂತೆ ಮಾಹಿತಿ ಬಂದ ತಕ್ಷಣ ಪ್ರಕರಣ ದಾಖಲಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲಾಗಿರುತ್ತದೆ. ಈ ಸಂಬಂಧ ದಾಖಲಾಗಿರುವ ಪ್ರಕರಣಗಳ ವಿವರವನ್ನು **ಅನುಬಂಧ 'ಅ'** ರಲ್ಲಿ ಲಗತ್ತಿಸಿದೆ. |
| ಆ) | ಈ ಸಮಾಜ ವಿದ್ರೋಹಿ ಶಕ್ತಿಗಳನ್ನು ಪತ್ತೆ ಹಚ್ಚಿ ಮಟ್ಟ ಹಾಕುವ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳುತ್ತಿರುವ ಕಟ್ಟುನಿಟ್ಟಿನ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ➢ ಠಾಣಾ ವ್ಯಾಪ್ತಿಯಲ್ಲಿ ಸಮಾಜ ವಿದ್ರೋಹಿ ಶಕ್ತಿಗಳ ಚಲನವಲನಗಳನ್ನು ಹಾಗೂ ಅವರ ಚಟುವಟಿಕೆಯ ಕುರಿತು ಮಾಹಿತಿಯನ್ನು ಆಗಾಗ ಕಲೆ ಹಾಕಿ ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಸಮಾಜ ವಿದ್ರೋಹಿ ಚಟುವಟಿಕೆಗಳಲ್ಲಿ ಭಾಗಿಯಾದರೆ ಅಂತವರನ್ನು ಕರ್ನಾಟಕ ಪೊಲೀಸ್ ಕಾಯ್ದೆ ಅನ್ವಯ ಗಡಿಪಾರು ಮಾಡಲು ಕ್ರಮ ಕೈಗೊಳ್ಳಲಾಗುವುದು.<br>➢ ಸಮಾಜ ವಿದ್ರೋಹಿ ಚಟುವಟಿಕೆಗಳಲ್ಲಿ ಭಾಗಿಯಾದರೆ ಅಂತವರನ್ನು ನಿಯಂತ್ರಣದಲ್ಲಿಡಲು ಗೂಂಡ ಕಾಯ್ದೆಯಂತೆ ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಮುಂಜಾಗ್ರತಾ ಕ್ರಮವಾಗಿ ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಸ್ಥಳಗಳಲ್ಲಿ ಪುಟ್ ಪೆಟ್ರೋಲಿಂಗ್ ಕರ್ತವ್ಯಕ್ಕೆ ಅಧಿಕಾರಿ/ಸಿಬ್ಬಂದಿಗಳನ್ನು ನೇಮಿಸಿ, ಪ್ರತಿದಿನ ಪುಟ್ ಪೆಟ್ರೋಲಿಂಗ್ ಮಾಡಲಾಗುತ್ತಿದೆ.<br>➢ ನಗರದ ಆಯಕಟ್ಟಿನ ಸ್ಥಳಗಳಲ್ಲಿ ಚೆಕ್‌ಪೋಸ್ಟ್ ತೆರೆದು, ಅನುಮಾನಾಸ್ಪದ ವಾಹನಗಳನ್ನು ಮತ್ತು ಅನುಮಾನಾಸ್ಪದ ವ್ಯಕ್ತಿಗಳನ್ನು ಚೆಕ್ ಮಾಡಲು ಸೂಚನೆ ನೀಡಲಾಗುತ್ತಿದೆ.<br>➢ ಸೂಕ್ಷ್ಮ ಪ್ರದೇಶಗಳಲ್ಲಿ ಸಿಬ್ಬಂದಿಗಳ ಹಾಜರಾತಿ ಪಡೆದು, ಕರ್ತವ್ಯದ ಬಗ್ಗೆ ಬ್ರೀಫಿಂಗ್ ಮಾಡಲಾಗುತ್ತಿದೆ.<br>➢ ಸೂಕ್ಷ್ಮ ಸ್ಥಳಗಳಲ್ಲಿ ರೂಟ್ ಮಾರ್ಚ್ ನಡೆಸಲಾಗುತ್ತಿದೆ. |

| | | |
|---|---|---|
| | | ➢ ಏರಿಯಾ ಡಾಮಿನೇಷನ್ (Area Domination) ನಡೆಸಿ, ಅನುಮಾನಾಸ್ಪಾದ ವ್ಯಕ್ತಿಗಳ ವಿರುದ್ದ ಕ್ರಮ ಕೆಪಿ ಆಕ್ಟ್ ಅಡಿಯಲ್ಲಿ ಕೈಗೊಳ್ಳಲಾಗುತ್ತಿದೆ.<br>➢ ಎನ್.ಡಿ.ಪಿ.ಎಸ್ ಟೆಸ್ಟ್‌ಗಳನ್ನು ನಡೆಸಿ, ಆರೋಪಿತರ ವಿರುದ್ದ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಎಂ.ಸಿ.ಸಿ.ಟಿ.ಎನ್.ಎಸ್ ತಂತ್ರಜ್ಞಾನ ಸಹಾಯದಿಂದ ರಾತ್ರಿ ಗಸ್ತು ವೇಳೆಯಲ್ಲಿ ಅನುಮಾನಾಸ್ಪದ ವ್ಯಕ್ತಿಗಳ ಬೆರಳು ಮುದ್ರೆಗಳನ್ನು ಸಂಗ್ರಹಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಪ್ರತಿದಿನ ಜೈಲಿನಿಂದ ಬಿಡುಗಡೆ ಗೊಳ್ಳುವ ಆರೋಪಿತರ ಮಾಹಿತಿಯನ್ನು ಜೈಲಿನಿಂದ ಸ್ವೀಕರಿಸಿ, ಅವರುಗಳ ಬಗ್ಗೆ ನಿಗಾವಹಿಸಲಾಗುತ್ತಿದೆ.<br>➢ ರೌಡಿ ಆಸಾಮಿಗಳು ಮತ್ತು ಕಮ್ಯೂನಲ್ ಗೂಂಡಾಗಳ ಮೇಲೆ ನಿಗಾವಹಿಸಿ, ಮುಂಜಾಗ್ರತಾ ಕಲಂ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ, ಬಾಂಡ್‌ಓವರ್ ಮಾಡಿಸಲಾಗುತ್ತಿದೆ.<br>➢ ನಗರ ವ್ಯಾಪ್ತಿ ಮತ್ತು ಹೊರ ವಲಯದಲ್ಲಿರುವ ಸಿ.ಸಿ ಕ್ಯಾಮರಾಗಳ ಮೂಲಕ ನಿಗಾವಹಿಸಲಾಗುತ್ತಿದೆ.<br>➢ ಶಾಂತಿ ಸಮಿತಿ, ಮೊಹಲ್ಲಾ ಸಭೆಗಳನ್ನು ನಡೆಸಿ, ಪೊಲೀಸರೊಂದಿಗೆ ಸಾರ್ವಜನಿಕರು ಸಹಕರಿಸುವಂತೆ ಕೋರಿಕೊಳ್ಳಲಾಗುತ್ತಿದೆ.<br>➢ ಇ.ಆರ್.ಎಸ್.ಎಸ್–112, ಮತ್ತು ಪಿ.ಸಿ.ಆರ್ ವಾಹನಗಳ ಮೂಲಕ ದಿನದ 24 ಗಂಟೆಗಳ ಕಾಲ ಗಸ್ತು ನಿರ್ವಹಿಸಲಾಗುತ್ತಿದೆ.<br>➢ ಸಾಮಾಜಿಕ ಜಾಲತಾಣಗಳ ಮೇಲ್ವಿಚಾರಣಾ ಘಟಕದ ಮೂಲಕ ವಾಟ್ಸಾಫ್, ಫೇಸ್‌ಬುಕ್ ಮೆಸೇಜ್, ಟೆಲಿಗ್ರಾಂ, ಇನ್ಸ್ಟಾಗ್ರಾಂಗಳ ಮೇಲೆ ನಿಗಾವಹಿಸಿ, ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಜಿಲ್ಲಾ ಪೊಲೀಸ್ ಸಹಯೋಗದೊಂದಿಗೆ ಇತರ ಏಜೆನ್ಸಿಗಳಾದ ರಾಜ್ಯ ಗುಪ್ತವಾರ್ತೆ ಅಂತರಿಕ ಭದ್ರತಾ ವಿಭಾಗದವರು ಸಹ ಇಂತಹ ಘಟನೆಗಳನ್ನು ತಡೆಗಟ್ಟುವ ಸಲುವಾಗಿ ಭಾಗವಹಿಸುತ್ತವೆ.<br>➢ ರಾಜ್ಯ ಪೊಲೀಸ್ ಇಲಾಖೆಯು ಕೇಂದ್ರ ಏಜೆನ್ಸಿಗಳಾದ ಐ.ಬಿ, ಎನ್.ಐ.ಎ ರವರೊಂದಿಗೆ ಅನುಮಾನಸ್ಪದ ವ್ಯಕ್ತಿಗಳ ಗುರುತಿನ ಬಗ್ಗೆ ಗುಪ್ತಚರ ಮಾಹಿತಿಗಳನ್ನು ಸಂಗ್ರಹಿಸುವಲ್ಲಿ ನಿರಂತರ ಸಂವಾಹನ ನಡೆಸಲಾಗುತ್ತಿದೆ ಮತ್ತು ಅಂತವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗಿರುತ್ತದೆ. |

| | | |
|---|---|---|
| ಇ) | ಈ ದುಷ್ಟ ಶಕ್ತಿಗಳನ್ನು ಗುರುತಿಸಿ ಕಾನೂನು ವ್ಯಾಪ್ತಿಯೊಳಗೆ ಅವರನ್ನು ಒಳಪಡಿಸಿ, ತುರ್ತು ಕಾರ್ಯಾಚರಣೆ ನಡೆಸಲು ರಾಜ್ಯವೇ ಪ್ರತ್ಯೇಕ ಪೊಲೀಸ್ ಕಮ್ಯಾಂಡೋ ಪಡೆ ರಚನೆಯ ಬಗ್ಗೆ ಸರ್ಕಾರ ಪರಿಶೀಲನೆ ನಡೆಸಿದೆಯೇ? | ➢ Center for Counter Terrorism (C.C.T)ಯ ಗರುಡ ಪಡೆ ಕಾರ್ಯನಿರ್ವಹಿಸುತ್ತದೆ.<br>➢ ಎಲ್ಲಾ ಘಟಕಗಳಲ್ಲಿನ ಕ್ಯೂ.ಆರ್.ಟಿ ತಂಡವು ತುರ್ತು ಸಂದರ್ಭದಲ್ಲಿ ಕಾರ್ಯ ನಿರ್ವಹಿಸಲ್ಪಡುತ್ತದೆ.<br>➢ ಲೋಕಲ್ ಪೊಲೀಸ್ ತಂಡವು ಸ್ಥಳೀಯ ಸನ್ನಿವೇಶಗಳಿಗೆ ಅನುಸಾರ ತ್ವರಿತವಾಗಿ ಅಗತ್ಯಕ್ಕೆ ತಕ್ಕಂತೆ ಕಾರ್ಯನಿರ್ವಹಿಸುತ್ತದೆ. |
| ಈ) | ಇಂತಹ ಪ್ರತ್ಯೇಕ ಮತ್ತು ಸ್ವಾತಂತ್ರ ಪಡೆ ಈ ಮೊದಲು ಅಸ್ತಿತ್ವದಲ್ಲಿ ಇದ್ದು ಕಾಲ ಕ್ರಮೇಣ ಇಲಾಖೆಗಳ ವರ್ಗಾವಣೆಯಲ್ಲಿ ಈ ಪಡೆ ತನ್ನ ಅಸ್ತಿತ್ವ ಕಳೆದುಕೊಂಡಿದ್ದು ಇದನ್ನು ಮರಳಿ ರಚಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ? | |

ಸಂಖ್ಯೆ: 670 ಎಸ್ ಎಸ್ ಟಿ 2022

**(ಆರಗ ಜ್ಞಾನೇಂದ್ರ)**
ಗೃಹ ಸಚಿವರು

## ಅನುಬಂಧ 'ಅ'

| ಶಿವಮೊಗ್ಗ ಜಿಲ್ಲೆ. | | | | | |
|---|---|---|---|---|---|
| ಕ್ರ ಸಂ | ಪೊಲೀಸ್ ಠಾಣೆ | ಮೊಕದ್ದಮೆ ಸಂಖ್ಯೆ ಮತ್ತು ಕಲಂ | ಆರೋಪಿಗಳ ವಿವರ | ಪ್ರಕರದ ಸಂಕ್ಷಿಪ್ತ ಸಾರಾಂಶ | ಪ್ರಸ್ತುತ ಹಂತ |
| 01 | ಶಿವಮೊಗ್ಗ ಗ್ರಾಮಾಂತರ ಠಾಣೆ | ಗುನ್ನೆ.ನಂ. 325/2022 ಕಲಂ 120(ಬಿ), 121, 12(ಎ) ಸಹಿತ 34 ಐಪಿಸಿ ಮತ್ತುಕಲಂ 18, 38, 39 ಕಾನೂನು ಬಾಹಿರಚಟುವಟಿಕೆಗಳ (ನಿಯಂತ್ರಣ) ಕಾಯ್ದೆ 1967 ಹಾಗೂಕಲಂ 02 ಪ್ರಿವೆಷನ್ಆಪ್ಇನ್ಸಲ್ಟ್ಟು ನ್ಯಾಷನಲ್ಹಾನರ್ಆಕ್ಟ್ | ಎ1 ಶಾರೀಕ್ ಬಿನ್ ದಿ॥ ಅಬ್ದುಲ್ ಮಜೀದ್ ವಾಸ: ಸೊಪ್ಪುಗುಡ್ಡೆ ತೀರ್ಥಹಳ್ಳಿ<br><br>ಎ2 ಮಾಜ್ ಬಿನ್ ಮುನೀರ್ ಅಹ್ಮದ್ ವಾಸ: ಮಂಗಳೂರು<br><br>ಎ3 ಸೈಯ್ಯದ್ ಯಾಸೀನ್ @ ಯಾಸೀನ್ @ ಬೈಲು ಬಿನ್ ಅಯೂಬ್ಖಾನ್ 21 ವರ್ಷ, ವಾಸ 1ನೇ ಕ್ರಾಸ್ ನರ್ಸರಿ ಸ್ಕೂಲ್ ಎದುರು ಸಿದ್ದೇಶ್ವರ ನಗರ ಶಿವಮೊಗ್ಗ | ದಿನಾಂಕ:-19-09-2022 ರದು ಸಂಜೆ 07.45 ಗಂಟೆಗೆ ಜಿತೇಂದ್ರಕುಮಾರ್ ದಯಾಮಾ ಐ.ಪಿ.ಎಸ್. ಸಹಾಯಕ ಪೊಲೀಸ್ ಅಧೀಕ್ಷಕರುರವರು ಠಾಣೆಗೆ ಹಾಜರಾಗಿ ನೀಡಿದ ಕಂಪ್ಯೂಟರ್ ಮುದ್ರಿತ ದೂರನ್ನು ಸ್ವೀಕರಿಸಿದ್ದು, ಈಗಾಗಲೇ ಕಾಲಂ: 06 ರಲ್ಲಿ ನಮೂದಿಸಿದ 3 ಜನ ಆರೋಪಿತರು ನಿಷೇದಿತ ಸಂಘಟನೆ ಇಸ್ಲಾಂಮಿಕ್ ಸ್ಟೇಟ್ (ಐ.ಎಸ್.ಐ.ಎಸ್) ನ ಭಯೋತ್ಪಾದಕ ಕೃತ್ಯಗಳನ್ನು ಮುಂದುವರೆಸಲು ಸಲುವಾಗಿ ಒಳಸಂಚು ಮಾಡಿಕೊಂಡು ದೇಶದಐಕತ್ಯ ಭಧ್ರತೆ ಮತ್ತು ಭಧ್ರತೆ ಮತ್ತು ಉದ್ದೇಶ ಪೂರ್ವಕವಾಗಿ ಸಾರ್ವಜನಿಕ ಆಸ್ತಿ ಮತ್ತು ಪ್ರಾಣಕ್ಕೆ ಅಪಾಯವಾಗುವ ಸ್ಫೋಟಕಗಳನ್ನು ಇಟ್ಟುಕೊಂಡಿರುವ ಬಗ್ಗೆ ಹಾಗೂ ಭಾರತದ ರಾಷ್ಟ್ರಧ್ವಜವನ್ನು ಸುಟ್ಟಿರುವುದಾಗಿ ತಿಳಿದು ಬಂದಿದ್ದು, ಈ ಕುರಿತು 3 ಜನಆರೋಪಿತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ನೀಡಿದ ದೂರಿನೊಂದಿಗೆ ಸೈಯದ್ ಯಾಸೀನ್ @ ಯಾಸೀನ್ @ ಬೈಲು ಈತನನ್ನು ಹಾಜರ್ ಪಡಿಸಿದ ಮೇರೆಗೆ ಪ್ರಕರಣ ದಾಖಲಾಗಿರುತ್ತದೆ. | ದಿ:03-12-2022 ರಾಷ್ಟ್ರೀಯ ತನಿಖಾ ದಳಕ್ಕೆ ಪ್ರಕರಣವನ್ನು ವರ್ಗಾವಣೆ ಕೊಟ್ಟಿರುತ್ತದೆ. |
| 2 | ದೊಡ್ಡಪೇಟೆ | ಗುನ್ನೆ ನಂ 77/2022 ಕಲಂ: 120(ಬಿ), 302, 341, 143, 201, 204, 212 ಸಹಿತ 149, 37 ಐಪಿಸಿ ಹಾಗೂ 25 (1) ಬಿ ಆರ್ಮ್ಸ್ ಕಾಯ್ದೆ ಮತ್ತು ಕಲಂ: 16, 18, 19, 20 ಕಾನೂನು ಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆ 1967 | ಎ1. ಖಾಸಿಫ್, 30 ವರ್ಷ, ಬುದ್ಧನಗರ, ಶಿವಮೊಗ್ಗ ಟೌನ್<br>ಎ2 ಸೈಯಾದ್ ನದೀಮ್, 20 ವರ್ಷ, ಜೆ.ಪಿ ನಗರ, ಶಿವಮೊಗ್ಗ ಟೌನ್.<br>ಎ3. ರಿಹಾನ್ ಶರೀಫ್ 22 ವರ್ಷ ಕ್ಲಾರ್ಕಪೇಟೆ ಶಿವಮೊಗ್ಗ ಟೌನ್.<br>ಎ4.ಆಶೀಫ್ ವುಲ್ಲಾಖಾನ್ 22 ವರ್ಷ ಕ್ಲಾರ್ಕ ಪೇಟೆ ಶಿವಮೊಗ್ಗ<br>ಎ5.ಅಬ್ದುಲ್ಆಫಾನ್, 21 ವರ್ಷ ಟ್ಯಾಂಕ್ ಮೊಹಲ್ಲಾ ಶಿವಮೊಗ್ಗ.<br>ಎ6 .ನಿಹಾನ್ 21 ವರ್ಷ ಮುರಾದ್ ನಗರ ಶಾದಿಮಹಲ್ ಶಿವಮೊಗ್ಗ.<br>ಎ7. ಫರಾಜ್ ಪಾಷಾ 24 ವರ್ಷ, ಇಲಿಯಾಸ್ ನಗರ, ಶಿವಮೊಗ್ಗ<br>ಎ8.ಅಬ್ದುಲ್ ಖಾದರ್ ಜಿಲಾನ್, 24 ವರ್ಷ, ವಾದಿ ಎ ಹುದಾ ಶಿವಮೊಗ್ಗ<br>ಎ9. ರೋಷನ್ ಬಿನ್ ಅಬ್ದುಲ್ ರಫೀಕ್ 24 ವರ್ಷ ವಾಸ ಹೊಸಮನೆ ಭದ್ರಾವತಿ<br>ಎ10. ಜಾಫರ್ ಸಾದಿಕ್, @ ಭದ್ರುದ್ದೀನ್ @ ಭದ್ರಿ ಬಿನ್ ಲೇಟ್ ಅಬ್ದುಲ್ ಸತ್ತಾರ್, 55 | ಫಿರ್ಯಾದಿಯ ಮಗ ಕಳೆದ 05ವರ್ಷಗಳಿಂದ ಭಜರಂಗ ದಳದ ಕಾರ್ಯಕರ್ತನಾಗಿ ಕೆಲಸ ಮಾಡಿಕೊಂಡಿದ್ದು. ಕೆಲ ಮುಸ್ಲಿಂ ಹುಡುಗರು ಫಿರ್ಯದಿಯ ಮಗನನನು ಕೊಲೆ ಮಾಡುತ್ತೇವೆ ಎಂದು ಹೇಳ್ತಾರೆಂದು ಹೇಳುತ್ತಿದ್ದು ಫಿರ್ಯಾದಿಯ ಮಗ ಯಾರ ತಂಟೆಗೂ ಹೋಗದೇ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದು ದಿ: 20.02.2022ರಂದು ಫಿರ್ಯಾದಿಯ ಮಗ ಊಟ ಮಾಡಲು ಎನ್ ಟಿ ರಸ್ತೆಯಲ್ಲಿ ಹೋಗುತ್ತಿರುವಾಗ ಯಾರೋ ದುಷ್ಕರ್ಮಿಗಳು ಫಿರ್ಯಾದಿಯ ಮಗನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದು ಇವನ ಮೇಲೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲು ನೀಡಿದ ದೂರು | ರಾಷ್ಟ್ರೀಯ ತನಿಖಾ ದಳಕ್ಕೆ ಪ್ರಕರಣವನ್ನು ವರ್ಗಾವಣೆ ಕೊಟ್ಟಿರುತ್ತದೆ |

| | | | | | |
|---|---|---|---|---|---|
| | | | ವರ್ಷ ಡೈಮಂಡ್‌ಕಾರ್ ಸೇಲ್ ಅಂಗಡಿ ಮಾಲೀಕ ವಾಸ ವಾದಿ ಎ ಹುದಾ ಶಿವಮೊಗ್ಗ | | |
| 3 | ದೊಡ್ಡಪೇಟೆ | ಗುನ್ನೆ ನಂ 334/2022 ಕಲಂ 143, 147, 148, 323, 307, 120(ಬಿ), 201 ಸಹಿತ 149 ಐಪಿಸಿ ಹಾಗೂ ಕಾನೂನು ಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆ 1967 ಕಲಂ: 16, 18 ಹಾಗೂ 39 (ಯುಎಪಿಎ ಕಾಯ್ದೆ 1967 | ಎ1) ಮೊಹವ್ಮದ್ ಜಭಿ @ ಚರ್ಬೀ ವಾಸ:- ಮಾರ್ನಾಮಿ ಬೈಲ್, ಶಿವಮೊಗ್ಗ<br>ಎ2) ತನ್ವೀರ್ ಅಹಮದ್ ಬಿನ್ ನಜೀರ್ ಅಹಮದ್, 22ವರ್ಷ, ಮುಸ್ಲಿಂ ಜಾತಿ, ಆರ್ ಎಂ ಎಲ್ ನಗರ ಶಿವಮೊಗ್ಗ<br>ಎ3) ನದೀಂ ಫೈಜಲ್ ಬಿನ್ ಲೇಟ್ ನೌಶಾದ್ ಅಲಿ, 25 ವರ್ಷ, ಮುಸ್ಲಿಂ ಜಾಥಿ, ಮೊಬೈಲ್ ಅಂಗಡಿಯಲ್ಲಿ ಕೆಲಸ, ವಾಸ: ಮಾರ್ನಮಿಬೈಲು, ಜೆಸಿ ನಗರ 02ನೇ ತಿರುವು ಶಿವಮೊಗ್ಗ ಮೊನಂ: 9880420249<br>ಎ4) ಅಬ್ದುಲ್ ರೆಹಮಾನ್ ಬಿನ್ ಅಬ್ದುಲ್ ಲತೀಫ್, 25 ವರ್ಷ, ಮುಸ್ಲಿಂ ಜಾತಿ, ವಾಸ: ಬುದ್ಧನಗರ, 02ನೇ ತಿರುವು ಶಿವಮೊಗ್ಗ | ಪಿರ್ಯಾದಿದಾರರು ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿದ್ದು ಗಾಯಾಳೂವಾದ ಪ್ರೇಮ್ ಸಿಂಗ್ ರವರು ಅವರೊಂದಿಗೆ ಕೆಲಸ ಮಾಡಿಕೊಂಡು ವಾಸವಾಗಿರುತ್ತಾರೆ ದಿನಾಂಕ-15-08-2022 ರಂದು ಸಂಜೆ 3.00 ಗಂಟೆಯ ಸಮಯದಲ್ಲಿ ಎಎ ಸರ್ಕಲ್ ಬಳಿ ಗುಂಪು ಕಟ್ಟಿಕೊಂಡು ಗಲಾಟೆ ಉಂಟಾಗಿದೆ ಅಂತಾ ಅವರ ಅಂಗಡಿಯ ಮಾಲೀಕರಿಗೆ ಪೋನ್ ಮಾಡಿ ತಿಳಿಸಿದಾಗ ಸದರಿಯವರು ಅಂಗಡಿ ಬಾಗಿಲನ್ನು ಮುಚ್ಚಿಕೊಂಡು ಬನ್ನಿ ಅಂತಾ ತಿಳಿಸಿದ ಮೇರೆಗೆ ಸದರಿವರು ಬಾಗಿಲು ಹಾಕಿಕೊಂಡು ಕಸ್ತೂರಿ ಬಾ ರಸ್ತೆಯ ತರಕಾರಿ ಅಂಗಡಿಯ ಬಳಿ ನಿಂತುಕೊಂಡಾಗ ಯಾರೋ 10-15 ಜನ ಮುಸ್ಲಿಂ ಜನಾಂಗದವರು ಗುಂಪು ಕಟ್ಟಿಕೊಂಡು ಬಂದು ನಮ್ಮಗಳಿಗೆ ಒಡೆದು ನಂತರ ಪ್ರೇಮ್ ಕುಮಾರ್‌ರವರಿಗೆ ಚಾಕುವಿನಿಂದ ಕೊಲೆ ಮಾಡುವ ಉದ್ದೇಶದಿಂದ ಹೊಟ್ಟೆ ಬಾಗಕ್ಕೆ ಚುಚ್ಚಿರುತ್ತಾರೆ ಅಂತಾ ಇತ್ಯಾದಿಯಾಗಿದ್ದ ದೂರಿನ ಸಾರಾಂಶವಾಗಿದೆ. | ರಾಷ್ಟ್ರೀಯ ತನಿಖಾ ದಳಕ್ಕೆ ಪ್ರಕರಣವನ್ನು ವರ್ಗಾವಣೆ ಕೊಟ್ಟಿರುತ್ತದೆ |
| **<u>ಮಂಗಳೂರು ನಗರ</u>** | | | | | |
| 4 | ಮಂಗಳೂರು ಪೂರ್ವ ಠಾಣೆ | ಅಪರಾಧ ಕ್ರಮಾಂಕ 104/2020 ಕಲಂ 153(ಎ), 204, 120(ಬಿ), 212, 34 ಐಪಿಸಿ ಮತ್ತು ಕಲಂ 13, 39 Unlawful activities Prevention Act 1967 | 1) ಅರಾಫತ್ ಅಲಿ (23) ತಂದೆಃ ಅಹಮ್ಮದ್ ಬಾವ ವಿಳಾಸಃ ನಂ 85, ಸಿದ್ದೇಶ್ವರ ಎಕ್ಸ್‌ಟೆನ್ಷನ್, ಬಾಳೆಬೈಲು, ತೀರ್ಥಹಳ್ಳಿ, ಶಿವಮೊಗ್ಗ ಹಾಲಿ: ಜುಮ್ಮಾ ಮಸೀದಿ ಹಿಂಬದಿ, ಇಂದಿರಾನಗರ, ತೀರ್ಥಹಳ್ಳಿ, ಶಿವಮೊಗ್ಗ<br>2) ಮಹಮ್ಮದ್ ಶಾರೀಕ್ (22) ತಂದೆಃ ಅಸಿಮ್ ಅಬ್ದುಲ್ ಮಜೀದ್ ವಿಳಾಸಃ ಸೊಪ್ಪುಗುಡ್ಡೆ, ಮಾರ್ಕೆಟ್ ರೋಡ್, ಎ.ಕೆ. ಕಾಲನಿ, ಅಫಾ ಮಂಝಿಲ್, ಆಜಾದ್ ಹೌಸ್ ಬಳಿ, ತೀರ್ಥಹಳ್ಳಿ, ಶಿವಮೊಗ್ಗ<br>3) ಮಾಝ್ ಮುನೀರ್ ಅಹಮ್ಮದ್ @ ಮಾಝ್ @ ಮುನೀರ್ (21) ತಂದೆಃ ಮುನೀರ್ ಅಹಮ್ಮದ್ ವಿಳಾಸಃ 801, 8 ನೇ ಮಹಡಿ, ಪ್ರೆಸಿಡೆನ್ಸಿ ಅವೆನ್ಯೂ ಅಪಾರ್ಟ್‌ಮೆಂಟ್, ಆರ್ಯಸಮಾಜ ರಸ್ತೆ, ಬಲ್ಮಠ, ಮಂಗಳೂರು<br>4) ಸಾದತ್ ಹುಸ್ಸೈನ್ ಕುಂದಾಪುರ (49) ತಂದೆಃ ದಿ. ಉಮ್ಮರ್ ಸಾಹೇಬ್ ವಿಳಾಸಃ ಎ.ಕೆ ಕಾಲನಿ, ಅಕ್ಷರ್ ಮಂಝಿಲ್, ಫಿಶ್ ಮಾರ್ಕೇಟ್ ರಸ್ತೆ, ಸೊಪ್ಪುಗುಡ್ಡೆ, ತೀರ್ಥಹಳ್ಳಿ, ಶಿವಮೊಗ್ಗ | 1 ನೇ ಆರೋಪಿಯು ನಿಷೇಧಿತ ಭಯೋತ್ಪಾದಕ ಸಂಘಟನೆಗಳಾದ ತಾಲಿಬಾನ್, ಲಷ್ಕರ್ ಇ ತೋಯಿಬಾ, ನುಜಾಹಿದ್ದಿನ್ ಮತ್ತು ಐಎಸ್‌ಐಎಸ್‌ಐ ಇದರ ಸದಸ್ಯರೊಂದಿಗೆ ಸಂಪರ್ಕಹೊಂದಿದ್ದು, ವಿದೇಶದಲ್ಲಿ ತಲೆಮರೆಸಿಕೊಂಡಿದ್ದು, ಈತನ ಸಹಚರರಾದ ಆರೋಪಿ ಮಹಮ್ಮದ್ ಶಾರೀಕ್, ಮಾಝ್ ಮುನೀರ್ ಅಹಮ್ಮದ್ @ ಮಾಝ್ @ ಮುನೀರ್ ಇವರು ದಿನಾಂಕ 27.11.2020 ರಂದು ಬಿಜೈ ಬಟ್ಟಗುಡ್ಡೆ ವೆಂಚುರಾ ಅಪಾರ್ಟ್‌ಮೆಂಟ್‌ನ ಕಂಪೌಂಡ್ ಗೋಡೆಯಲ್ಲಿ ಸ್ಪ್ರೇ ಪೈಂಟ್ ಬಳಸಿ "ಆಔ ಓಔಖ ಈಔಖಅಇ ಗಖ ಖಿಔ ಙಓಗಙಖಇ ಐಚ್ಞಇಚಿಡಿ-ಜ-ಖಿಚುಛಚಿ ಂಟಿಜ ಖಿಚಿಟುಛಚಿಟಿ ಣಡಿ ಆಜಚಿಟ ತಿಣು ಖಚಿಟಿಯು ಂಟಿಜ ಒಚಿಟಿತಿಜಜಫ # ಐಚ್ಞಇಚಿಡಿ ಚುಟಿಜಚಿಛಚಿಜ"ಎಂದು ನಿಷೇಧಿತ ಭಯೋತ್ಪಾದನಾ ಸಂಘಟನೆಗಳ ಪರವಾಗಿ ಗೋಡೆ ಬರಹ ಬರೆದು ವಿಭಿನ್ನ ಧರ್ಮಗಳ ನಡುವೆ ದ್ವೇಷ ಮಾಡಿ ಸಾರ್ವಜನಿಕ ನೆಮ್ಮದಿಗೆ ಭಂಗವುಂಟುಮಾಡಿರುತ್ತಾರೆ ಮತ್ತು ಆರೋಪಿ ಸಾದತ್ ಹುಸ್ಸೈನ್ ಕುಂದಾಪುರ ಆರೋಪಿಗಳು ದಸ್ತಗಿರಿಗೆ ಸಿಗದಂತೆ ತಪ್ಪಿಸಿಕೊಳ್ಳಲು ಸಹಕರಿಸಿರುತ್ತಾನೆ ಎಂಬಿತ್ಯಾದಿ. | ಎಸ್‌ಸಿ ನಂಬ್ರ 101/12022 ರಂತೆ ಮಾನ್ಯ 3 ನೇ ಹೆಚ್ಚುವರಿ ಸೆಶನ್ಸ್ ನ್ಯಾಯಾಲಯದ ಲ್ಲಿ ವಿಚಾರಣೆಯಲ್ಲಿರು ತ್ತದೆ. |

| | | | | | |
|---|---|---|---|---|---|
| 5 | ಮಂಗಳೂರು ಉತ್ತರ ಠಾಣೆ | ಅ.ಕ್ರ 89/2020 ಕಲಂ 153(ಎ), 204, 120(ಬಿ), 212, 34 ಐಪಿಸಿ ಮತ್ತು ಕಲಂ **13, 39** Unlawful activities Prevention Act 1967 | 1) ಅರಾಫತ್ ಅಲಿ (23) ತಂದೆ: ಅಹಮ್ಮದ್ ಬಾವ ವಿಳಾಸ: ನಂ 85, ಸಿದ್ದೇಶ್ವರ ಎಕ್ಸ್‌ಟೆನ್ಷನ್, ಬಾಳೆಬೈಲು, ತೀರ್ಥಹಳ್ಳಿ, ಶಿವಮೊಗ್ಗ ಹಾಲಿ: ಜುಮ್ಮಾ ಮಸೀದಿ ಹಿಂಬದಿ, ಇಂದಿರಾನಗರ, ತೀರ್ಥಹಳ್ಳಿ, ಶಿವಮೊಗ್ಗ<br>2) ಮಹಮ್ಮದ್ ಶಾರೀಕ್ (22) ತಂದೆ: ಅಸಿಮ್ ಅಬ್ದುಲ್ ಮಜೀದ್ ವಿಳಾಸ: ಸೊಪ್ಪುಗುಡ್ಡೆ, ಮಾರ್ಕೆಟ್ ರೋಡ್, ಎ.ಕೆ. ಕಾಲನಿ, ಅಫಾ ಮಂಝೀಲ್, ಆಜಾದ್ ಹೌಸ್ ಬಳಿ, ತೀರ್ಥಹಳ್ಳಿ, ಶಿವಮೊಗ್ಗ<br>3) ಮಾಝ್ ಮುನೀರ್ ಅಹಮ್ಮದ್ @ ಮಾಝ್ @ ಮುನೀರ್ (21) ತಂದೆ: ಮುನೀರ್ ಅಹಮ್ಮದ್ ವಿಳಾಸ: 801, 8 ನೇ ಮಹಡಿ, ಪ್ರೆಸಿಡೆನ್ಸಿ ಅವೆನ್ಯೂ ಅಪಾರ್ಟ್‌ಮೆಂಟ್, ಆರ್ಯಸಮಾಜ ರಸ್ತೆ, ಬಲ್ಮಠ, ಮಂಗಳೂರು<br>4) ಸಾದತ್ ಹುಸೈನ್ ಕುಂದಾಪುರ (49) ತಂದೆ: ದಿ. ಉಮ್ಮರ್ ಸಾಹೇಬ್ ವಿಳಾಸ: ಎ.ಕೆ ಕಾಲನಿ, ಅಕ್ಬರ್ ಮಂಝಿಲ್, ಫಿಶ್ ಮಾರ್ಕೆಟ್ ರಸ್ತೆ, ಸೊಪ್ಪುಗುಡ್ಡೆ, ತೀರ್ಥಹಳ್ಳಿ, ಶಿವಮೊಗ್ಗ | 1 ನೇ ಆರೋಪಿಯು ನಿಷೇಧಿತ ಭಯೋತ್ಪಾದಕ ಸಂಘಟನೆಗಳಾದ ತಾಲಿಬಾನ್, ಲಷ್ಕರ್ ಇ ತೋಯಿಬಾ, ಮುಜಾಹಿದ್ದಿನ್ ಮತ್ತು ಐಎಸ್ಐಎಸ್ಐ ಇದರ ಸದಸ್ಯರೊಂದಿಗೆ ಸಂಪರ್ಕಹೊಂದಿದ್ದು, ವಿದೇಶದಲ್ಲಿ ತಲೆಮರೆಸಿಕೊಂಡಿದ್ದು, ಈತನ ಸಹಚರರಾದ ಆರೋಪಿ ಮಹಮ್ಮದ್ ಶಾರೀಕ್, ಮಾಝ್ ಮುನೀರ್ ಅಹಮ್ಮದ್ @ ಮಾಝ್ @ ಮುನೀರ್ ಇವರು ದಿನಾಂಕ 9.11.2020 ರಂದು 23.00 ಗಂಟೆಗೆ ಮಾನ್ಯ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ಹಳೆಯ ಪೊಲೀಸ್ ಹೊರ ಠಾಣೆಯ ಕಟ್ಟಡದ ಗೋಡೆಯಲ್ಲಿ ಸ್ಪ್ರೇ ಪೈಂಟ್ ಬಳಸಿ **"GUSTAK E RASOOL KI EK HI SAZA SAR TAN SAY JUDA"** ಎಂದು ನಿಷೇಧಿತ ಭಯೋತ್ಪಾದನಾ ಸಂಘಟನೆಗಳ ಪರವಾಗಿ, ಷರಿಯತ್ ಕಾನೂನಿನ ಪರವಾಗಿ ಗೋಡೆ ಬರಹ ಬರೆದು ವಿಭಿನ್ನ ಧರ್ಮಗಳ ನಡುವೆ ದ್ವೇಷ ಮಾಡಿ ಸಾರ್ವಜನಿಕ ನೆಮ್ಮದಿಗೆ ಭಂಗವುಂಟುಮಾಡಿರುತ್ತಾರೆ ಮತ್ತು ಆರೋಪಿ ಸಾದತ್ ಹುಸೈನ್ ಕುಂದಾಪುರ ಆರೋಪಿಗಳು ದಸ್ತಗಿರಿಗೆ ಸಿಗದಂತೆ ತಪ್ಪಿಸಿಕೊಳ್ಳಲು ಸಹಕರಿಸಿರುತ್ತಾನೆ ಎಂಬಿತ್ಯಾದಿ. | ಎಸ್‌ಸಿ ನಂಬ್ರ 24/2022 ರಂತೆ ಮಾನ್ಯ 3 ನೇ ಹೆಚ್ಚುವರಿ ಸೆಶನ್ಸ್ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ. |
| 6 | ಕಂಕನಾಡಿ ಪೊಲೀಸ್ ಠಾಣೆ | ಮೊ.ನಂ: 119/2022 ಕಾ/ 307, 120(ಬಿ) 419, 465, 468, 471 ಐಪಿಸಿ & 16, 38, 39 Unlawful Activity Prevention Act | ಮಹಮ್ಮದ್ ಶಾರೀಕ್ | ದಿನಾಂಕ: 19-11-2022 ರಂದು ಮಂಗಳೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ಕಂಕನಾಡಿ ನಗರ ಪೊಲೀಸ್ ಠಾಣೆ ಸರಹದ್ದಿನ ರೋಹನ್ ಸ್ಕ್ವೇರ್‌ನ ಕಟ್ಟಡದ ಎದುರುಗಡೆ ಇರುವ ಬಸ್‌ಸ್ಟ್ಯಾಂಡ್ ಬಳಿ ಸಾಯಂಕಾಲ 4-40 ಗಂಟೆಗೆ ಆಟೋ ರಿಕ್ಷಾವೊಂದರಲ್ಲಿ ಸ್ಫೋಟಗೊಂಡ ಶಬ್ದವಾಗಿ ಆಟೋದಲ್ಲಿ ಬೆಂಕಿ ಹತ್ತಿಕೊಂಡು ಹೊಗೆ ಕಾಣಿಸಿಕೊಂಡಿದ್ದು, ಆರೋಪಿ ಶಾರೀಕ್ ಹಾಗೂ ಪಿರ್ಯಾದಿದಾರರಾದ ಪುರುಷೋತ್ತಮ ಪೂಜಾರಿ ರವರು ಗಾಯಾಳುಗಳಾಗಿ ಮಂಗಳೂರು ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆಯಲ್ಲಿರುತ್ತಾರೆ. | ಪ್ರಸ್ತುತ ಈ ಪ್ರಕರಣವು ಎನ್.ಐ.ಎ ರವರಿಗೆ ಹಸ್ತಾಂತರಿಸಲಾಗಿರುತ್ತದೆ. |
| 7 | ಪಣಂಬೂರು ಠಾಣಾ | ಅ.ಕ್ರ ನಂಬ್ರ 71/2022<br>ಕಲಂ: U/s-121, 121A, 120B, 153A, 109 IPC; UNLAWFUL ACTIVITIES (PREVENTION) ACT,1967 (U/s-13(1)(B), 18) PANAMBUR PS | ಒಟ್ಟು ಆರೋಪಿಗಳು-20<br>ದಸ್ತಗಿರಿ-05<br>ತಲೆಮರೆಸಿ ಕೊಂಡವರು-15<br>ದಸ್ತಗಿರಿಯಾದ ಆರೋಪಿಗಳು<br>1. ಮೊಹಮ್ಮದ್ ರಫೀಕ್ @ ಶಾರ್ಟ್‌ರಫೀಕ್ @ ಕುಂಟತಂದೆ: ಬಿ ಎಮ್ ಸಯ್ಯದ್ ವಾಸ: ಆ.ಓ.ಠ. 30242/27, ನಡುಮನೆ, ಕೆಂಪುಕೊಲ, ಜೊಕಟ್ಟೆ, ಮಂಗಳೂರು | ಪಿರ್ಯಾದುದಾರರಾದ ಮಹೇಶ್‌ಕುಮಾರ್ ಪಿಐ ಸಿಸಿಬಿ ಘಟಕರವರು ನೀಡಿದದೂರಿನ ಸಾರಾಂಶವೇನೆಂದರೆ ಪಿಎಫ್ಐಸಂಘಟನೆಯ ಸದಸ್ಯರಾದ 1.) ಅಬೂಬಕ್ಕರ್ ಕುಳಾಯಿ,2)ಜಲೀಲ್‌ಕೃಷ್ಣಾಪುರ, 3) ಮೊಹಮ್ಮದ್ ಬಿಲಾಲ್,4)ಅಬ್ದುಲ್‌ಅಜೀಜ್ ಸುರತ್ಕಲ್,5. ಮೊಹಮ್ಮದ್‌ಇಂತಿಶಾಂ, 6. ಮೊಹಮ್ಮದ್‌ರಫೀಕ್ @ ಶಾರ್ಟ್‌ರಫೀಕ್ @ ಕುಂಟರಫೀಕ್ ,7. ಖಾದರ್ ಕುಳಾಯಿ @ ಖಾದರ್ ಆಲಿ .8. ಮೊಹಮ್ಮದ್ ನವಾಸ್, @ | ತನಿಖೆಯಲ್ಲಿದೆ. |

| | | | | | |
|---|---|---|---|---|---|
| | | | 2. ಮೊಹಮ್ಮದ್ ಬಿಲಾಲ್, ತಂದೆ: ಯೂಸುಫ್ ವಾಸ: ಎಮ ಜೆಎಮ್ 138, ಕಸಬಾ ಬೇಂಗ್ರೆ, ಮಂಗಳೂರು<br>3. ಅಬ್ಬಾಸ್‌ಕಿನ್ಯಾತಂದೆ: ಇಬ್ರಾಹಿಂ ವಾಸ: ಡೋರ್ ನಂಬ್ರ 3–33/1, ಕಿನ್ಯಾ ವಿಲೇಜ್,ಉಳ್ಳಾಲ, ಮಂಗಳೂರು.<br>4. ಮೊಹಮ್ಮದ್ ರಫೀಕ್ ತಂದೆ: ಯು.ಪಿ ಮೋಸನ ವಾಸ: ಡೋರ್ ನಂಬ್ರ 14–75 ಕೆ ಬಿ ಉಳ್ಳಾಲ, ಮಂಗಳೂರು<br>5.ಅಕ್ಬರ್ ಸಿದ್ದಿಕ್ ತಂದೆ: ತಂದೆ. ಅಬ್ದುಲ್ ವಾಸ: 3–661/1 ಅಡ್ಯಾರ, ಮಂಗಳೂರು<br><br>ತಲೆಮರೆಸಿಕೊಂಡ ಆರೋಪಿಗಳು<br>1. ಅಬೂಬಕ್ಕರ್ ಕುಳಾಯಿ,<br>2. ಜಲೀಲ್ ಕೃಷ್ಣಾಪುರ,<br>3. ಅಬ್ದುಲ್ ಅಜೀಜ್ ಸುರತ್ಕಲ್,<br>4. ಮೊಹಮ್ಮದ್‌ಇಂತಿಶಾಂ,<br>5. ಖಾದರ್ ಕುಳಾಯಿ @ ಖಾದರ್ ಆಲಿ .<br>6. ಮೊಹಮ್ಮದ್ ನವಾಸ್, @ ವೆಜ್ ನವಾಸ್,<br>7.ಝುಹೀದ್ ಮಲಾರ್@ ಮೊಹಮ್ಮದ್‌ಜಯಾದ್,<br>8. ಅಕ್ರಂ ಹಸನ್<br>9.ಮೊಹಮ್ಮದ್ ಇಕ್ಬಾಲ್ @ ಇಕ್ಬಾಲ್‌ಕೆತ್ತಿಕ್ಕಲ್,<br>10. ಹಮೀದ್ ಸರ್ಫಾನ್<br>11. ಬಿ ಎಂ ಅಬ್ದುಲ್ ಮಜೀದ್‌ಜೋಕಟ್ಟೆ,<br>12.ಮೊಹಮ್ಮದ್ ಶರೀಫ್ @ ಶರೀಫ್‌ತೋಡಾರ್,<br>13 ಮೊಹಮ್ಮದ್ ಹನೀಫ್ @ ಅದ್ಯಪಾಡಿ ಹನೀಫ್,<br>14.ಝುಕೀರ್ ಹುಸೈನ್ ಉಳ್ಳಾಲ,<br>15.ಮೊಹಮ್ಮದ್ ಕಬೀರ್ ಬಜಾಲ್. | ವೆಜ್ ನವಾಸ್, 9.ಝುಹೀದ್ ಮಲಾರ್@ ಮೊಹಮ್ಮದ್‌ಜಯಾದ್, 10. ಅಕ್ರಂ ಹಸನ್ 11.ಅಬ್ಬಾಸ್ ಕಿನ್ಯಾ, 12.ಮೊಹಮ್ಮದ್ ಇಕ್ಬಾಲ್ @ ಇಕ್ಬಾಲ್‌ಕೆತ್ತಿಕ್ಕಲ್, 13. ಹಮೀದ್ ಸರ್ಫಾನ್ 14. ಬಿ ಎಂ ಅಬ್ದುಲ್ ಮಜೀದ್ ಜೋಕಟ್ಟೆ,15.ಮೊಹಮ್ಮದ್ ಶರೀಫ್ @ ಶರೀಫ್‌ತೋಡಾರ್, 16. ಮೊಹಮ್ಮದ್ ಹನೀಫ್ @ ಅದ್ಯಪಾಡಿ ಹನೀಫ್,17.ಝುಕೀರ್ ಹುಸೈನ್ ಉಳ್ಳಾಲ,18.ಮೊಹಮ್ಮದ್ ಕಬೀರ್ ಬಜಾಲ್. 19 .ಅಕ್ಬರ್ ಸಿದ್ದಿಕ್ ಎಂಬುವರುಗಳ ಸಂಘಟನೆ ಬ್ಯಾನ್ ನಂತರವೂ ಸರ್ಕಾರ ಹಾಗೂ ದೇಶ ದ್ರೋಹದ ಚಟುವಟಿಕೆ ನಡೆಸಿದ ಬಗ್ಗೆ ಸದರಿ ಕಾರ್ಯಕರ್ತರ ವಿರುದ್ಧ ಮತ್ತು ಪಿ.ಎಫ್. ಸಂಘಟನೆಯ ವಿರುದ್ಧ ಐಪಿಸಿಯ ಕಲಂ 121, 121(ಎ), 120(ಬಿ), 153(ಎ), 109 ಹಾಗೂ ಕಾನೂನು ಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯ್ದೆ 1967 ಕಲಂ 13(1)(ಬಿ), 18 ಅಡಿಯಲ್ಲಿ ಅಗತ್ಯ ಕಾನೂನು ಕ್ರಮ ಕೈಗೊಳ್ಳಲು ಕೋರಿದೆ ಎಂಬುದಾಗಿರುತ್ತದೆ. | |